**ಹೆಚ್ಚುವರಿ ಹಿರಿಯ  ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ. **2327/24**

| | |
|---|---|
| ಸಾಕ್ಷಿದಾರರ ಹೆಸರು | : ಗಣೇಶ್ ಪೈ |
| ತಂದೆಯ/ಗಂಡನ ಹೆಸರು | : ಸತ್ಯನಾರಾಯಣ ಮೂರ್ತಿ ಪೈ |
| ವಯಸ್ಸು | : 58 |
| ಉದ್ಯೋಗ | : ಎಫ್.ಡಿ.ಎ. ಕೆನರಾ ಬ್ಯಾಂಕ್ |
| ವಾಸಃ | : ಹಾರೆಗೊಪ್ಪ |

ಸಿ ಡಬ್ಲ್ಯೂ-2        ಪಿ.ಡಬ್ಲ್ಯೂ-1

**ದಿನಾಂಕ  04.11.2024 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ**

2012 ರಿಂದ 2018  ರವರೆಗೆ ಕೆನರಾ ಬ್ಯಾಂಕ್ ಕೆಳದಿ ಶಾಖೆಯಲ್ಲಿ ಎಫ್ ಡಿ ಎ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿಃ27.12.2017 ರಂದು ಬೆಳಗ್ಗೆ ನಾನು 9.45 ಗೆ ಬ್ಯಾಂಕ್ ಗೆ ಹೋದಾಗ ಚಾಸಾ-1 ರವರು ಬ್ಯಾಂಕ್ ನ ಬಾಗಿಲನ್ನು ತೆಗೆದು ಒಳಗೆ ಹೋದಾಗ ಕಿಟಕಿಯ ಸರಳು ಮುರಿದ ಸ್ಥಿತಿಯಲ್ಲಿತ್ತು. ನಾನು ಮತ್ತು ಚಾಸಾ-1  ಮತ್ತು  3 ರವರು  ಪರಿಶೀಲನೆ ಮಾಡಿ ನೋಡಿದಾಗ ಎಕ್ಸಲರ್ ಬ್ಲೇಡ್ ಮತ್ತು ತುಂಡಾದ ಸರಳು ಇತ್ತು. ಒಳಗಡೆ ಪರಿಶೀಲಿಸಿದಾಗ ಕಳ್ಳತನ ಆದ ಹಾಗೆ ಕಂಡು ಬಂದಿರುವುದಿಲ್ಲ. ಕಳ್ಳತನ ಮಾಡುವ ಉದ್ದೇಶದಿಂದ ಈ ರೀತಿ ಮಾಡಿರಬಹುದು. 26.12.2017 ಮತ್ತು 27.12.2017 ರ ಮಧ್ಯದಲ್ಲಿ ಈ ಘಟನೆ ನಡೆದಿರಬಹುದು. ಚಾಸಾ-1 ರವರು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ.

ಪೋಲಿಸರು ದಿಃ28.12.2017 ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಮಹಜರ್ ನ್ನು ಮಾಡಿರುತ್ತಾರೆ. ಎಕ್ಸಲರ್ ಬ್ಲೇಡ್ ಮತ್ತು ತುಂಡಾದ ಸರಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಕಳ್ಳತನ ಮಾಡಿದ್ದು ಯಾರೆಂದು ಅವತ್ತು ಗೊತ್ತಿರಲಿಲ್ಲ, 2 ತಿಂಗಳ ಬಳಿಕ ಪೋಲಿಸರು ಇಬ್ಬರು ಆರೋಪಿಗಳನ್ನು ಕರೆದುಕೊಂಡು ಬಂದಿದ್ದರು. ಅ ಇಬ್ಬರಲ್ಲಿ ಒಬ್ಬ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇದ್ದಾನೆ. ನ್ಯಾಯಾಲಯದ ಮುಂದಿರುವ

ಎಕ್ಸಲರ್ ಬ್ಲೇಡ್ ಮತ್ತು ತುಂಡಾದ ಸರಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರ್ ನ್ನು ನಿಶಾನೆ ಪಿ-1 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ 1(ಎ) ಎಂದು ಗುರುತಿಸಲಾಯಿತು. ಒಂದು ಫೋಟೋವನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ಮಹಜರ್ ಕಾಲದಲ್ಲಿ ತೆಗೆಯಲಾಗಿದೆ ಎಂದು ಗುರುತಿಸಿದ ಮೇರೆಗೆ ಅದನ್ನು ನಿಶಾನೆ ಪಿ-2 ಎಂದು, ಅದಕ್ಕೆ ಸಂಬಂಧಪಟ್ಟ ಸಿಡಿಯನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ.ಎಂ ಎ ಬಿ ವಕೀಲರಿಂದಃ-</u>

ಪೋಲಿಸ್ ಠಾಣೆಗೆ ಈ ಘಟನೆ ಸಂಬಂಧ ಹೋಗಿರುವುದಿಲ್ಲ. ಚಾಸಾ-1 ರವರು ಏನೆಂದು ಪಿರ್ಯಾದು ನೀಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಅ ದಿನ ಚಾಸಾ-1 ರವರ ಜೊತೆ ಚಾಸಾ-3 ರವರು ಹೋಗಿದ್ದರು. ನಿಶಾನೆ ಪಿ1 ರ ಸಹಿಯನ್ನು ನಾನು ಬ್ಯಾಂಕ್ ನಲ್ಲಿ ಹಾಕಿರುತ್ತೇನೆ. ನಿಶಾನೆ ಪಿ -1 ರಲ್ಲಿ ಬರೆದಿರುವ ವಿಚಾರವನ್ನು ಪೋಲಿಸರು ನನಗೆ ಓದಿ ಹೇಳಿರುತ್ತಾರೆ. ಚಾಸಾ-1 ರವರು ಹೇಳಿದ ಮೇರೆಗೆ ನಿಪಿ-1 ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿ. 2 ತಿಂಗಳ ಬಳಿಕ ಪೋಲಿಸರು ಇಬ್ಬರನ್ನು ಕರೆದುಕೊಂಡು ಬಂದ ದಿನ ಯಾವತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಬೆಳಗ್ಗೆ 11.00 ಗಂಟೆಗೆ ಬಂದಿದ್ದರು, ಅ ದಿನ ನನ್ನ ಬಳಿ ಯಾವುದೇ ಸಹಿ ಪಡೆದಿರುವುದಿಲ್ಲ.

ಸಾಮಾನ್ಯವಾಗಿ ಮುದ್ದೆ ಮಾಲು -1 ಮತ್ತು 2 ರೀತಿಯ ವಸ್ತುಗಳು ಗುಜರಿ ಅಂಗಡಿಯಲ್ಲಿ ದೊರೆಯುತ್ತವೆ ಎಂದರೆ ಸರಿ. ನಿಪಿ-1 ನನ್ನ ಮುಂದೆಬರವಣಿಗೆ ಆಗಿರುವುದಿಲ್ಲ ಮತ್ತು ಅದನು ಯಾರು ಬರೆದರು ಎಂದು ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.